
ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಆಧ್ಯಾತ್ಮಿಕ ಅನುಭವದಿಂದ ಒಡಗೂಡಿದ ಅವರ ಮಾತುಗಳು ಆ ಪಂಡಿತರಿಗೆ ಹೊಸ ಬೆಳಕು ನೀಡಿದವು.

ಕಾಶ್ಮೀರ ವಾಸ್ತವ್ಯದಲ್ಲಿ ತೆಗೆದ ಒಂದು ಸಾಮೂಹಿಕ ಚಿತ್ರ ಇದು.

(ಎಡದಿಂದ – ಕುಳಿತವರು) ಸ್ವಾಮಿ ಸದಾನಂದ, ಸ್ವಾಮಿ ವಿವೇಕಾನಂದ, ಸ್ವಾಮಿ ನಿರಂಜನಾನಂದ, ಸ್ವಾಮಿ ಧೀರಾನಂದ...

ಮಿಕ್ಕವರು, ಸ್ವಾಮೀಜಿಯವರ ಭಕ್ತರು ಮತ್ತು ಅಭಿಮಾನಿಗಳು.



ಚಿತ್ರ: ೧೯

**ಛಾಯಾಚಿತ್ರ ೧೯:** ಛಾಯಾಚಿತ್ರ ೧೮ರಿಂದ ಬೇರ್ಪಡಿಸಿ ತೆಗೆದ ಚಿತ್ರ ಇದು. ಕಾಶ್ಮೀರದ ವಾಸದಿಂದ ಸ್ವಾಮೀಜಿಯವರ ಆರೋಗ್ಯ ಬಹಳವಾಗಿ ಸುಧಾರಿಸಿತು. ಇದು ಈ ಚಿತ್ರದಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

ಒಂದು ದಿನ ಕಾಶ್ಮೀರದ ರಾಜ, ಸ್ವಾಮೀಜಿಯವರೊಡನೆ ಬಹಳ ಹೊತ್ತು ಸಂಭಾಷಣೆ ನಡೆಸಿದ. ರಾಜರುಗಳೊಂದಿಗೆ ನಡೆಯುವ ಸಂಭಾಷಣೆಗಳಿಗೆ ಸ್ವಾಮೀಜಿ ವಿಶೇಷ ಮಹತ್ವ ನೀಡುತ್ತಿದ್ದರು. ಏಕೆಂದರೆ ಅವರ ಅಭಿಪ್ರಾಯದಂತೆ, ಒಬ್ಬ ರಾಜನ ಬುದ್ಧಿಯನ್ನು ಸರಿಪಡಿಸಿದರೆ, ಆ ಮೂಲಕ ಅವನ ಪ್ರಜೆಗಳೆಲ್ಲರಿಗೂ ಸನ್ಮಾರ್ಗವನ್ನು ತೋರಿಸಬಹುದು, ಸತ್ಪ್ರಜೆಗಳನ್ನಾಗಿಸಬಹುದು. ಸ್ವಾಮೀಜಿ ಹಿಂದೂಧರ್ಮದ ಮಹಿಮೆ, ಘನತೆ, ಗಾಂಭೀರ್ಯಗಳ ಬಗ್ಗೆ ರಾಜನೊಡನೆ ಮಾತನಾಡುತ್ತ ಹೀಗೆ ಹೇಳಿದರು: "ನಾವು ಅರ್ಥವಿಲ್ಲದ ಕಂದಾಚಾರಗಳಿಗೆ ಕಟ್ಟುಬಿದ್ದಿರುವುದು ಅಥವಾ ಬಾಹ್ಯಾಚಾರಗಳನ್ನೇ ಧರ್ಮವೆಂದು ಭಾವಿಸುವುದು ಕೇವಲ ಮೂರ್ಖತನ. ನಾವು ಧರ್ಮವನ್ನು ಯಥಾರ್ಥವಾಗಿ ಗ್ರಹಿಸದೆ ವಿಕೃತವಾಗಿ ಅರ್ಥೈಸಿದ್ದೇವೆ."

**ಛಾಯಾಚಿತ್ರ ೨೦:** ಸ್ವಾಮಿ ವಿವೇಕಾನಂದರು ೧೮೯೮ರ ಜೂನ್ ತಿಂಗಳಿನಲ್ಲಿ ತಮ್ಮ ಪಾಶ್ಚಾತ್ಯ ಶಿಷ್ಯೆಯರೊಂದಿಗೆ ಕಾಶ್ಮೀರ ಪ್ರವಾಸ ಕೈಗೊಂಡರು. ಆಗ ಅವರು ಜೀಲಂ ನದಿಯ ಮೇಲೆ, ೩೩೦ ಅಡಿ ಉದ್ದವಿರುವ ನಾಲ್ಕು ದೋಣಿ ಮನೆಗಳಲ್ಲೇ ವಾಸವಾಗಿದ್ದರು. ಇಂಥ ದೋಣಿಮನೆಗೆ 'ಡುಂಗ' ಎಂದು ಕರೆಯುತ್ತಾರೆ. ಅದರಲ್ಲಿಯೇ ಶ್ರೀನಗರದ ಆಸುಪಾಸಿನ ಸ್ಥಳಗಳಿಗೆಲ್ಲ ಸ್ವಾಮೀಜಿ ಭೇಟಿಕೊಟ್ಟರು. ದಾರಿಯಲ್ಲಿ ಪ್ರಕೃತಿದೇವಿ ತನ್ನ ಅಲೌಕಿಕ ಸೌಂದರ್ಯದಿಂದ ವಿರಾಜಿಸುತ್ತಿದ್ದಳು. ಈ ದೃಶ್ಯಗಳನ್ನು ನೋಡಿ, ಅವರಿಗೆಲ್ಲ ಮೇರೆ ಇಲ್ಲದ ಆನಂದವಾಯಿತು.




ಚಿತ್ರ: ೨೦

ಈ ಛಾಯಾಚಿತ್ರದಲ್ಲಿ ಕಾಣುವ ದೋಣಿ ಮನೆಯಲ್ಲಿ ಜೊಸಫಿನ್ ಮ್ಯಾಕ್ಲೌಡ್, ಶ್ರೀಮತಿ ಸಾರಾ ಬುಲ್, ಸೋದರಿ ನಿವೇದಿತಾ ಹಾಗೂ ಸ್ವಾಮೀಜಿ ಕುಳಿತುಕೊಂಡಿರುವುದನ್ನು ಗುರುತಿಸಲಾಗಿದೆ.


# ಕೃಷ್ಣ ತಿಂದ ಕಡಲೆಕಾಳು

**ಕಥೆ : ವಿವೇಕಾನಂದ ದಾಸ** **ಚಿತ್ರ : ತಾಮರೈ**










ಊಟಮಾಡುವಾಗ, ಶ್ರೀಕೃಷ್ಣನು ಧರ್ಮರಾಜನ ಪಕ್ಕದಲ್ಲಿಯೇ ಕುಳಿತುಕೊಳ್ಳುತ್ತಿದ್ದನು. ಉಡುಪಿಯ ರಾಜನು ಇಬ್ಬರಿಗೂ ತಾನೇ ಬಡಿಸುತ್ತಿದ್ದನು.
4
5
ಉಡುಪಿಯ ರಾಜನು ಪ್ರತಿದಿನವೂ ಯುದ್ಧದಲ್ಲಿ ಬದುಕಿ ಉಳಿದವರಿಗೆ ಸಾಕಾಗುವಷ್ಟು ಮಾತ್ರ ಅಡುಗೆ ಮಾಡಿಸುತ್ತಿದ್ದನು. ಪ್ರತಿದಿನವೂ ಎಷ್ಟು ಜನ ಸಾಯುವರೆಂಬುದು ಅವನಿಗೆ ಹೇಗೂ ತಿಳಿಯುತ್ತಿತ್ತು.
ಪ್ರತಿದಿನವೂ ಯುದ್ಧ ಮುಗಿದ ಮೇಲೆ ದುರ್ಯೋಧನನ ಸೈನಿಕರು ಅವನ ಬಳಿ ಹೋಗಿ ಹೀಗೆ ಹೇಳುತ್ತಿದ್ದರು:
6
ಮಹಾರಾಜ, ಇಂದು ನಮ್ಮೆಲ್ಲ ಸೈನಿಕರೂ ಊಟ ಮಾಡಿದರು.
7
ಸರಿ, ನೀನಿನ್ನು ಹೋಗಿ ವಿಶ್ರಾಂತಿ ತೆಗೆದುಕೋ.


8
ಪ್ರತಿದಿನವೂ ಸೈನಿಕರ ಊಟ ವಾದ ಬಳಿಕ ಪಾಂಡವರು, ತಮ್ಮ ಸೈನಿಕರು ವಿಶ್ರಾಂತಿ ತೆಗೆದು ಕೊಳ್ಳುವ ಬಿಡಾರಕ್ಕೆ ಹೋಗಿ ಕೇಳುತ್ತಿದ್ದರು.
ನೀವೆಲ್ಲರೂ ಊಟ ಮಾಡಿದಿರಾ?
ಹೌದು ಸ್ವಾಮಿ, ನಮ್ಮೆಲ್ಲರ ಊಟ ಆಗಿದೆ.
9
ದುರ್ಯೋಧನನ ಕಡೆಯವರದು?
ಅವರದೂ ಊಟ ಆಗಿದೆ, ಸ್ವಾಮಿ.
10
ಒಂದು ದಿನ ಪಾಂಡವರು ಅಡುಗೆಮನೆಗೆ ಹೋದರು
ಪ್ರತಿದಿನ ಅಡುಗೆ ಕಡಮೆಯಾಗುತ್ತಿದೆಯೋ, ಇಲ್ಲಾ ಹೆಚ್ಚಾಗುತ್ತಿದೆಯೋ?
ಪ್ರತಿದಿನವೂ ಯುದ್ಧದಲ್ಲಿ ಬದುಕುಳಿದ ಜನಕ್ಕೆ ಸಾಕಾಗುವಷ್ಟು ಆಹಾರವನ್ನು ಮಾತ್ರ ನಮ್ಮ ಉಡುಪಿಯ ದೊರೆ ನಿರ್ಧರಿಸುತ್ತಾರೆ. ಆದ್ದರಿಂದ ಹೆಚ್ಚು ಕಡಮೆಯಾಗುವ ಪ್ರಶ್ನೆಯೇ ಇಲ್ಲ.
11
ಉಡುಪಿ ದೊರೆಯ ಅಡುಗೆಯವರು ಧರ್ಮರಾಜನಿಗೆ ಹೇಳಿದರು:
ನಮ್ಮ ರಾಜನಿಗೆ ಪ್ರತಿದಿನ ಎಷ್ಟು ಜನ ಸೈನಿಕರು ಸಾಯುತ್ತಾರೆಂಬುದು ಹೇಗೋ ಗೊತ್ತಾಗಿಬಿಡುತ್ತದೆ. ಅಷ್ಟು ಜನರ ಆಹಾರವನ್ನು ಕಡಮೆ ಮಾಡಿ, ಉಳಿದವರಿಗೆ ಮಾತ್ರವೇ ಅಡುಗೆ ಮಾಡಿಸುತ್ತಾರೆ.
ಹೀಗೇನು? ನಾನು ಈ ಬಗ್ಗೆ ಕೃಷ್ಣನನ್ನು ಕೇಳುತ್ತೇನೆ.
12
ಕೃಷ್ಣ, ನನಗೊಂದು ಸಂದೇಹ ಬಂದಿದೆ.
ಏನು ಧರ್ಮರಾಯ, ಆ ಸಂದೇಹ? ನನಗೆ ಹೇಳು.